

ಪಕ್ಕದಲ್ಲೇ ಒಂದು ಮಾಂಸಾಹಾರಿ ಹೋಟೆಲ್‌ನಲ್ಲಿ ರಾತ್ರಿಗೆ ತಿನ್ನಲು ಊಟ, ಮದ್ಯಪಾನದ ಜೊತೆ ನಂಜಿಕೊಳ್ಳಲು ತಿಂಡಿ ತಿನಿಸುಗಳು, ಸಿಗರೇಟ್ ಮತ್ತೆ ನೀರಿನ ಬಾಟಲಿಗಳು ತೆಗೆದುಕೊಂಡು ಹೊರಡುತ್ತಾನೆ.

ವಿಶ್ವ, ರಾಜೇಶ್, ಸೂರಿ, ತೇಜ, ಹರಿ, ಮಧು ಇವರು ಆರು ಜನ ಒಂದು ಗುಂಪು. ವಿಶ್ವ, ತೇಜ ಒಂದೇ ಊರಿನವರು. ರಾಜೇಶ್, ಮಧು ಮತ್ತು ಸೂರಿ, ಅಲ್ಲೇ ಸುತ್ತಮುತ್ತ ಬೇರೆ ಬೇರೆ ಹಳ್ಳಿಗಳಿಗೆ ಸೇರಿದವರು. ವಿಶ್ವ, ತೇಜ, ಇಬ್ಬರು ಒಂದೇ ಶಾಲೆ, ಒಂದೇ ಕಾಲೇಜು, ಒಂದೇ ಹಾಸ್ಟೆಲ್. ಕಾಲೇಜಿನಲ್ಲಿ ಇವರಿಬ್ಬರ ಜೊತೆ ಬಂದು ಸೇರಿದವನು ರಾಜೇಶ್. ಇವರೆಲ್ಲರೂ ಅವರ ಊರಿನಿಂದ ಸುಮಾರು ಎಪ್ಪತ್ತು ಕಿ.ಮೀ. ದೂರವಿದ್ದ ಬೆಂಗಳೂರಿನಲ್ಲಿ ಖಾಸಗಿ ಕಂಪೆನಿಗಳಲ್ಲಿ ಕೆಲಸ ಮಾಡುತ್ತಿದ್ದರು. ಕೆಲಸ ಮಾಡುವ ಕಂಪೆನಿಗಳು ಬೇರೆಯಾದರು ಮೊದಲು ವಿಶ್ವ, ತೇಜ, ಮತ್ತು ರಾಜೇಶ್ ಮೂವರು ಒಂದೇ ಬಾಡಿಗೆ ಮನೆಯಲ್ಲಿದ್ದರು. ಬೆಂಗಳೂರಿನಂತಹ ಮಹಾ ನಗರದಲ್ಲಿ, ನಾವು ಒಬ್ಬಂಟಿ ಅಲ್ಲದಿದ್ದರೂ, ನಮ್ಮ ಊರಿನ ಕಡೆಯವರು ಯಾರಾದರೂ ಸಿಕ್ಕಿದರೆ, ಎಲ್ಲರ ಅಭಿರುಚಿ ಒಂದೇ ಆಗದಿದ್ದರೂ, ನಮ್ಮ ಊರಿನ ಕಡೆಯ ವಿಷಯ, ತೋಟ, ಹೊಲಗದ್ದೆ, ರಾಜಕೀಯ ಮುಂತಾದವನ್ನೂ ಹರಟುವುದಕ್ಕೋ ಏನೊ ಇನ್ಯಾರೊಟ್ಟಿಗೆ ಇಲ್ಲದಂತಹ ಸಲಿಗೆ ಸ್ನೇಹ ಅವರೊಟ್ಟಿಗೆ ಬೆಳೆದುಬಿಡುತ್ತದೆ. ಅದರಿಂದಲೇ ಎನ್ನುವಂತೆ ರಾಜೇಶನ ಸ್ನೇಹದಿಂದ ಸೂರಿ, ವಿಶ್ವನ ಸಹಾಯದಿಂದ ಮಧು ಮತ್ತು ಅವನ ಮಾವನ ಮಗನೇ ಆದ ಹರಿ ಅವರ ಗುಂಪಿಗೆ ಬಂದದ್ದು. ಸೂರಿ ಮತ್ತು ಮಧು ಮೊದಲು ಪಿ.ಜಿಯೊಂದರಲ್ಲಿ ತಂಗಿದ್ದರು. ಆದರೆ ಅವರಿಗೆ ಬರುತ್ತಿದ್ದ ಸಂಬಳದಲ್ಲಿ ಪಿಜಿಯ ಬಾಡಿಗೆ, ಅವರ ಖರ್ಚು ಹೋಗಿ ಮನೆಗೆಂದು ಹಣ ಕಳುಹಿಸಲು ಉಳಿಯುತ್ತಿದ್ದುದೇ ಅಲ್ಪಸ್ವಲ್ಪ. ಮೂವರಿದ್ದ ಬಾಡಿಗೆ ಮನೆಯಲ್ಲಿ ಆರು ಜನ ಆದಾಗ ಸ್ವಲ್ಪ ಇಕ್ಕಟ್ಟಾದರೂ, ಜನ ಜಾಸ್ತಿ ಆದಷ್ಟು ಬಾಡಿಗೆ, ಮನೆ ಖರ್ಚುಗಳು ಹಂಚಿಕೆಯಾಗಿ, ಎಲ್ಲರ ಉಳಿತಾಯ ಜಾಸ್ತಿಯಾದ್ದರಿಂದ, ಎಲ್ಲರಿಗೂ ಇದರಿಂದ ಅನುಕೂಲವೇ ಆಗಿತ್ತು. ಇಬ್ಬರೂ ಮೂವರೂ ಹೆಣ್ಣು ಮಕ್ಕಳು ಈ ರೀತಿ ಜೊತೆಯಿದ್ದರೆ, ಅವರಲ್ಲಿ ಮೊದಲು ಭಿನ್ನಾಭಿಪ್ರಾಯ ಮೂಡುವುದು ಕೆಲಸ ಕಾರ್ಯ ಹಂಚಿಕೆ ಮತ್ತು ಸ್ವಚ್ಛತೆ ಕಾರಣಕ್ಕಾಗಿ. ಇವರು ಎಲ್ಲರೂ ಊಟ ತಿಂಡಿ ಹೊರಗೆ ಮಾಡುತ್ತಿದ್ದುದರಿಂದ, ಮನೆಯಲ್ಲಿ ಗ್ಯಾಸ್ ಸ್ಟೌ ಹಚ್ಚುತ್ತಿದ್ದುದೂ, ಪಾತ್ರೆ ತೊಳೆಯುತ್ತಿದ್ದುದೂ ಅನಿವಾರ್ಯತೆ ಇದ್ದಾಗ ಮಾತ್ರ. ಇನ್ನು ಕಸಗಿಸ, ಕ್ಲೀನಿಂಗ್ ಗೀನಿಂಗ್ ಎಲ್ಲಾ ತುಂಬಾ ವಿರಳ. ಆದ್ದರಿಂದಲೋ ಏನೋ ಇವರ ಮಧ್ಯೆ ಬಿನ್ನಭಿಪ್ರಾಯಗಳೇನೂ ಅಷ್ಟೇನು ಹೆಚ್ಚಾಗಿ ಬರಲಿಲ್ಲ.

ಇವರು ಐದು ಜನ ಕೆಲಸ ಮುಗಿಸಿ ಶುಕ್ರವಾರ ಸಂಜೆ ಊರಿಗೆಂದು ಹೋದರೂ ಸೀದಾ ಮನೆಗಳಿಗೆ ಹೋಗದೆ ಅವರ ಊರಿನಿಂದ ಸುಮಾರು ಐದಾರು ಕಿ.ಮೀ. ದೂರದಲ್ಲಿದ್ದ ಅವರ ಎಣ್ಣೆ ಮರದ ಬಳಿ ಹೋಗಿ ವೀಕೆಂಡ್ ಪಾರ್ಟಿ ಮಾಡಿ ಅಲ್ಲೇ ಮಲಗಿ ಮರುದಿನ ಎದ್ದು ಮನೆಗೆ ಹೋಗುತ್ತಿದ್ದರು. ವೀಕೆಂಡ್ ಪಾರ್ಟಿ ಎಂದರೆ ವಿಶೇಷವೇನಿಲ್ಲ ಮದ್ಯಪಾನ ಸೇವಿಸಿ, ಧೂಮಪಾನ ಮಾಡಿ ತಂದ ತಿಂಡಿ ತಿನಿಸುಗಳನ್ನು ತಿಂದು ಅದು ಇದು ಹರಟುತ್ತಾ ಅಲ್ಲೇ ಊಟ ಮಾಡಿ ಮಲಗಿ ಬೆಳಿಗ್ಗೆ ಎದ್ದು ಅವರವರ ಮನೆಗಳಿಗೆ ಹೋಗುವುದು. ಈ ಮಹಾಕಾರ್ಯಕ್ಕೆ ಅವರು ವೀಕೆಂಡ್ ಪಾರ್ಟಿ ಎಂದು ಹೆಸರಿಟ್ಟು ಅದನ್ನು ಮಾಡಲು ಒಂದು ಸೂಕ್ತವಾದ ನಿರ್ಜನ ಪ್ರದೇಶವನ್ನಾರಿಸಿ ಆ ಜಾಗಕ್ಕೆ ಎಣ್ಣೆ ಮರ ಎಂದು ಕರೆಯುತ್ತಿದ್ದರು. ಇವರಲ್ಲಿ ಐದು ಜನಕ್ಕೂ ವಾರದಲ್ಲಿ ಐದು ದಿನ ಕೆಲಸವಾದರೆ ಮಧುಗೆ ಭಾನುವಾರ ಮಾತ್ರ ರಜೆ ಇತ್ತು ಮತ್ತು ಅವನ ಊರು ಕೂಡ ಬೇರೆಯ ಕಡೆಯೇ ಇತ್ತು. ಆದ್ದರಿಂದ ಇವರ ಎಣ್ಣೆ ಗುಂಪಿನ ಸದಸ್ಯತ್ವದಿಂದ ಅವನು ದೂರ ಉಳಿದಿದ್ದನು.

ಎಣ್ಣೆ ಮರ ಎಂದರೆ ಅವರ ಊರಿನಿಂದ ಸುಮಾರು ಐದಾರು ಕಿ.ಮೀ. ದೂರದ ತೋಪುಗಳಲ್ಲಿದ್ದ ಒಂದು ದೊಡ್ಡ ಆಲದ ಮರ. ಇವರ ವೀಕೆಂಡ್ ಪಾರ್ಟಿ ದೆಸೆಯಿಂದ ಅದಕ್ಕೆ ಎಣ್ಣೆ ಮರ ಎಂದು ನಾಮಕರಣವಾಯಿತು. ಊರಿನ ಜನ, ಅದರಲ್ಲೂ ಹೆಂಗಸರು ಯಾರೂ ಅಲ್ಲಿಗೆ ಹೋಗಲು ಧೈರ್ಯ ಮಾಡುತ್ತಿರಲಿಲ್ಲ. ಬೇರೆಲ್ಲೂ ಮೇವು ಸಿಗದ ಬೇಸಿಗೆಯಲ್ಲಿ ಕುರಿ ಮೇಕೆ ಮೇಯಿಸುವವರು, ದನ ಕಾಯುವವರು ಇಲ್ಲಿಗೆ ಬರುತ್ತಿದ್ದರು. ಆದರೆ ಒಬ್ಬೊಬ್ಬರೇ ಬರಲು ಹೆದರುತ್ತಿದ್ದರು. ಅದಕ್ಕೆ ಕಾರಣ ಅಲ್ಲಿ